ಅದಕ್ಕೂ ಮೊದಲು ನಾನು ನೋಡಿಯೇ ಇರಲಿಲ್ಲ. ಏಕೆಂದರೆ ಅಮ್ಮ ಹೋದ ನಂತರ ಅವರ ಚಟುವಟಿಕೆ ಏನಿದ್ದರೂ ನನ್ನ ಹಾಗೂ ಅವರ ಮಧ್ಯೆಯೇ ಗಿರಕಿ ಹೊಡೆಯುತ್ತಿತ್ತು. ಹೊರಗಿನವರೊಂದಿಗೆ ಹೆಚ್ಚು ಮಾತನಾಡುತ್ತಿರಲಿಲ್ಲ. ಸುತ್ತಮುತ್ತಲಿನವರು ಬಂದು ಮಾತನಾಡಿಸಿದರೂ ಹೆಚ್ಚು ಮಾತನಾಡುತ್ತಿರಲಿಲ್ಲ. ಹೀಗಿದ್ದ ಜೀವನ ಒಂದು ಕುಟುಂಬ ನಮ್ಮ ಮನೆಗೆ ಬಂದು ಉಳಿದುಕೊಂಡು ಹೋಗುತ್ತಿದ್ದಂತೆಯೇ ಬದಲಾಯಿತು. ಸುತ್ತಮುತ್ತಲಿನವರೊಂದಿಗೆ ಮಾತನಾಡುವುದು ಹೆಚ್ಚಾಯಿತು. ಅವರ ಕಷ್ಟ- ಸುಖಗಳಲ್ಲಿ, ದುಃಖ- ದುಮ್ಮಾನಗಳಲ್ಲಿ ಪಾಲ್ಗೊಳ್ಳುವುದು ಹೆಚ್ಚಾಯಿತು. ಅಪ್ಪಯ್ಯನಲ್ಲಿನ ಈ ಪರಿವರ್ತನೆಯನ್ನು ಸುತ್ತಲಿನವರೂ ಗುರುತಿಸಿದರು. ನಮ್ಮ ಮನೆಗೆ ಅತಿಥಿಗಳು ಬಂದರೆ ಅವರನ್ನು ನೆಂಟರೆಂದೇ ಕರೆಯುವ ರೂಢಿ ಸುತ್ತಮುತ್ತಲಿನವರಿಗೆ ಆಯಿತು.

* * *

ಅಪ್ಪಯ್ಯನ ಈ ಬದಲಾವಣೆಯನ್ನು ಗುರುತಿಸಿದ ಮಕ್ಕಳು ಅಪ್ಪಯ್ಯನಿಗೆ ಕಳಿಸುತ್ತಿದ್ದ ಹಣದ ಮೊತ್ತವನ್ನು ಹೆಚ್ಚು ಮಾಡಿದರು. ಕೆಲವು ತಿಂಗಳು ಕಳೆದ ನಂತರ ಪಕ್ಕದಲ್ಲಿದ್ದ ಸೈಟಿನಲ್ಲಿ ದೊಡ್ಡದೊಂದು ಮನೆಯನ್ನು ಕಟ್ಟಿ ಇವರ ಆಸೆಗೆ ಇನ್ನಷ್ಟು ಇಂಬು ನೀಡಬಹುದು ಎನ್ನಿಸಿತೋ ಏನೋ ದೂರವಾಣಿಯಲ್ಲೇ ಎಲ್ಲ ಮಕ್ಕಳೂ ಈ ವಿಚಾರವಾಗಿ ಚರ್ಚಿಸಿದರು. ಸುಂದರವಾದ ಮತ್ತು ಎಲ್ಲ ವ್ಯವಸ್ಥೆಗಳನ್ನು ಹೊಂದಿದ ದೊಡ್ಡ ಕಟ್ಟಡವನ್ನೇ ಕಟ್ಟಲು ಯೋಜನೆ ಹಾಕಿದರು. ಇದಕ್ಕೆ ಅವರೆಲ್ಲರೂ ನೀಡಿದ ಸಮಜಾಯಿಷಿ ಏನೆಂದರೆ, 'ನಾವೆಲ್ಲ ಇಲ್ಲಿಗೆ ಬಂದಾಗ ಉಳಿದುಕೊಳ್ಳಲು ಒಂದು ಉತ್ತಮ ಮನೆ ಇದ್ದಂತಾಗುತ್ತದೆ. ಮಾತ್ರವಲ್ಲ ಇದನ್ನು ಪ್ರವಾಸಿಗರು ಉಳಿದುಕೊಳ್ಳುವ ಅತಿಥಿಗೃಹದಂತೆಯೂ ಬಳಸಬಹುದು' ಎಂದು ಹೇಳಿದರು.

'ನನಗೇನೂ ತಿಳಿಯದು. ನೀವು ಹೇಗೆ ಯೋಚಿಸುತ್ತೀರೋ ಹಾಗೆ ಮಾಡಿ' ಎಂದು ಹೇಳಿದರು ಅಪ್ಪಯ್ಯ.

ಅಲ್ಲಿಂದ ಮುಂದೆ ಅಪ್ಪಯ್ಯನಿಗೆ ಮನೆ ಕಟ್ಟಿಸುವ ಹೊಣೆಗಾರಿಕೆಯೂ ಒದಗಿತು. ಅದನ್ನೂ ಚೆನ್ನಾಗಿ ನಿಭಾಯಿಸಿದರು ಅಪ್ಪಯ್ಯ. ಮನೆ ನಿರ್ಮಾಣವಾಯಿತು. ಅದರ ಪ್ರವೇಶ ಕಾರ್ಯಕ್ಕೆ ಎಲ್ಲರೂ ಸಮಯವನ್ನು ಹೊಂದಿಸಿಕೊಂಡು ಬಂದರು. ಮನೆಯ ಪ್ರವೇಶವನ್ನು ಮುಗಿಸಿಕೊಂಡು ತಿಂಗಳುಗಳ ಕಾಲ ಇಲ್ಲಿಯೇ ಇದ್ದು ಅವರವರ ಸಂಬಂಧಿಕರ ಮನೆಗಳಿಗೆಲ್ಲ ಭೇಟಿ ನೀಡಿ ವಾಪಸು ತೆರಳಿದರು.



* * *

ಅವರು ಇಲ್ಲಿ ಇರುವವರೆಗೆ ಅಪ್ಪಯ್ಯ ಅವರೊಂದಿಗೆ ಇದ್ದರು. ಅವರೆಲ್ಲ ಪ್ರಯಾಣ ಬೆಳೆಸುತ್ತಿದ್ದಂತೆಯೇ ಮರಳಿ ಗೂಡಿಗೆ ಎಂಬಂತೆ ತಮ್ಮ ಹಳೆಯ ಮನೆಯತ್ತ ಬಂದರು. ನೀವು ನೋಡಿದಿರಲ್ಲ ದೊಡ್ಡದಾದ ಬಂಗಲೆ ಅದೇ ಅವರೆಲ್ಲ ಸೇರಿ ಕಟ್ಟಿಸಿದ ಮನೆ(!). ಅದಕ್ಕೆ ಭೌತಿಕವಾಗಿ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿಲ್ಲವೇ ಹೊರತು ಅದು ಗಾಳಿ, ಮಳೆ, ಚಳಿ, ಬಿಸಿಲುಗಳನ್ನು ತಡೆದುಕೊಂಡು ನಿಂತಿರುವಂತೆ ಎಲ್ಲ ವ್ಯವಸ್ಥೆಯನ್ನೂ ಮಾಡಲಾಗಿದೆ. ಇಷ್ಟು ಮಾತ್ರವಲ್ಲ ಅಪ್ಪಯ್ಯ ಮನೆಯಲ್ಲಿನ ಒಂದು ಕಟ್ಟೆಗೆ ಒರಗಿಕೊಂಡು ನಿಂತಿರುತ್ತಾರಲ್ಲ ಅದನ್ನು ಏನು ಎಂದುಕೊಂಡಿರಿ, ಅದು ಮಕ್ಕಳೆಲ್ಲ ತಿಂಗಳುತಿಂಗಳೂ ಕಳಿಸುವ ಹಣವನ್ನೆಲ್ಲ ಸೇರಿಸಿ ದೊಡ್ಡದೊಂದು ಮೂಟೆ ಕಟ್ಟಿ ಅಲ್ಲಿ ನಿಲ್ಲಿಸಿದ್ದಾರೆ. ಅದಕ್ಕೆ ಒರಗಿನಿಂತು ಮಕ್ಕಳೊಂದಿಗೆ ಮಾತನಾಡಿದಂತೆ ಮಾತನಾಡುತ್ತಾರೆ ಅಪ್ಪಯ್ಯ, ಅದೂ ನನ್ನನ್ನೂ ಒಳಗೊಂಡಂತೆ ಯಾರೂ ಇಲ್ಲದೇ ಇರುವಾಗ. ಇದನ್ನು ನಾನು ಕದ್ದು ನೋಡಿ ತಿಳಿದಿದ್ದೇನೆಯೇ ಹೊರತು ಅವರು ಮಾತನಾಡುವಾಗ ಎದುರಿಗೆ ನಿಂತು ನೋಡಿಲ್ಲ. ಒಂದೊಮ್ಮೆ ನಾನು ನೋಡಿದ್ದೇನೆ ಎಂದು ತಿಳಿದರೆ ಅವರು ಏನು ಮಾಡುತ್ತಾರೋ ನನಗೆ ತಿಳಿಯದು.

* * *

ಮನೆಗೆ ಯಾರೇ ಅತಿಥಿಗಳು ಬಂದರೂ ಅಪ್ಪಯ್ಯ ಆ ಮೂಟೆಯಲ್ಲಿನ ಒಂದು ಕಾಸನ್ನೂ ಮುಟ್ಟುವುದಿಲ್ಲ. ಅವರು ತಮ್ಮ ತೋಟದಿಂದ ಬರುವ ಆದಾಯವನ್ನೇ ಬರುವ ಅತಿಥಿಗಳ ಸತ್ಕಾರಕ್ಕೆ ಮತ್ತು ನನ್ನ ಓದಿಗೆ ಬಳಸುವುದು. ಅವರು ಹಾಗೆಂದು ಯಾರ ಬಳಿಯೂ ಹೇಳುವುದಿಲ್ಲ. ಅವರನ್ನು ನೀವು ದಿಟ್ಟಿನೆಟ್ಟು ನೋಡಿದಾಗ ಮಾತ್ರ ಅವರ ಈ